# ಟ್ರಾಫಿಕ್ ಆಗದಂತೆ ನೋಡಿಕೊಳ್ಳುವುದೇ ಪರಿಹಾರ

ಹೃದಯಾಘಾತಕ್ಕೆ ದೂಳು ಹೊಸ ಕಾರಣವಾಗಿ ಬೆಳೆದುಕೊಂಡಿದೆ. ವಾತಾವರಣದಲ್ಲಿ ಸೃಷ್ಟಿಯಾಗುವ ದೂಳಿಗಿಂತ ವಾಹನಗಳ ಹೊಗೆ ಹೆಚ್ಚು ಮಾರಕ. ಮಧುಮೇಹ, ರಕ್ತದೊತ್ತಡವು ಹೃದಯಾಘಾತಕ್ಕೆ ಎಷ್ಟರ ಮಟ್ಟಿಗೆ ಕಾರಣವಾಗಿವೆಯೋ ಅಷ್ಟೇ ಪ್ರಮಾಣದಲ್ಲಿ ವಾಹನಗಳ ಹೊಗೆ ಕೂಡ ಕಾರಣ.

ಟ್ರಾಫಿಕ್ ಆಗದಂತೆ ನೋಡಿಕೊಳ್ಳುವುದೇ ಇದಕ್ಕೆ ಪರಿಹಾರ. ಹೆಚ್ಚು ಹೊತ್ತು ವಾಹನಗಳು ಒಂದೆಡೆ ನಿಲ್ಲದಂತೆ ನೋಡಿಕೊಳ್ಳಬೇಕು. ನಗರದಲ್ಲಿ ಹೆಚ್ಚು ಮೇಲ್ಸೇತುವೆಗಳು ಆಗದಂತೆ ತಡೆಯುವವರು ಇದರ ಬಗ್ಗೆಯೂ ಚಿಂತಿಸಬೇಕು. ವಾಹನಗಳ ಹೊಗೆಯಿಂದ ಮನುಷ್ಯರಿಗಷ್ಟೇ ತೊಂದರೆ ಆಗುತ್ತಿದೆ ಎನ್ನುವುದು ತಪ್ಪು. ಮರಗಳೂ ಇದರಿಂದ ನಾಶ ಆಗುತ್ತಿವೆ. ಮಧ್ಯ ಪ್ರಾಚ್ಯ ದೇಶಗಳಲ್ಲಿ ಮರಗಳು ಇಲ್ಲದಿದ್ದರೂ ವಾತಾವರಣದ ಗುಣಮಟ್ಟ ಚೆನ್ನಾಗಿದೆ. ಆದರೆ ಇಲ್ಲಿ ಮರಗಳು ಇದ್ದರೂ ವಾಯುಮಾಲಿನ್ಯ ಹೆಚ್ಚುತ್ತಿದೆ. ಹೊಗೆಯು ರಕ್ತನಾಳದಲ್ಲಿ ಸೇರಿಕೊಂಡು ರಕ್ತ ಸಂಚಲನಕ್ಕೆ ತೊಂದರೆ ಉಂಟುಮಾಡುತ್ತದೆ. ಇದರಿಂದ ಹೃದಯಾಘಾತವಾಗುತ್ತದೆ. ನಮ್ಮ ಆಸ್ಪತ್ರೆಯ ತೀವ್ರನಿಗಾ ಘಟಕದಲ್ಲಿ ಶೇ 20ರಷ್ಟು ರೋಗಿಗಳು ಟ್ಯಾಕ್ಸಿ, ಆಟೊ ಸೇರಿದಂತೆ ವಾಹನಗಳ ಚಾಲಕರೇ ಇರುತ್ತಾರೆ. ಇದರಲ್ಲಿ ಟ್ರಾಫಿಕ್ ಪೊಲೀಸರೂ ಸೇರಿದ್ದಾರೆ. ವಾಹನ ದಟ್ಟಣೆಯಿಂದ ಆಗುವ ಮಾನಸಿಕ ಒತ್ತಡದ ಜೊತೆ ದೈಹಿಕವಾಗಿಯೂ ಇರುವ ತೊಂದರೆಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ನಗರದ ವಿವಿಧೆಡೆ ಮೆಟ್ರೊ ರೈಲನ್ನು ವಿಸ್ತರಿಸಬೇಕು. ವಿದ್ಯುತ್‌ಚಾಲಿತ ವಾಹನಗಳ ಸಂಚಾರ ಹೆಚ್ಚಾಗಬೇಕು ಆಗ ಮಾಲಿನ್ಯದ ಪ್ರಮಾಣ ಕಡಿಮೆಯಾಗಲಿದೆ.



**ಡಾ.ಸಿ.ಎನ್.ಮಂಜುನಾಥ್**

ನಿರ್ದೇಶಕ, ಜಯದೇವ ಹೃದ್ರೋಗ ಸಂಸ್ಥೆ